<u>ಸಾಕ್ಷಿಗೆ ದಿನಾಂಕಃ **07-01-2025 ರಂದು** ಪ್ರಮಾಣ ವಚನ ಬೋಧಿಸಲಾಯಿತು</u>

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1) ಆರೋಪಿ ಮತ್ತು ನಾನು ಗೋಕಾಕ ನಗರದ ನಿವಾಸಿಗಳು ಎಂದರೆ ಸರಿ. ಆರೋಪಿ ನನಗೆ ಕಳೆದ 20 ವರ್ಷಗಳಿಂದ ಪರಿಚಯಸ್ಥನಿರುತ್ತಾನೆ. ನಾನು ಗುತ್ತಿಗೆದಾರನೆಂದು ಕೆಲಸ ಮಾಡುತ್ತೇನೆ. ಗುತ್ತಿಗೆದಾರನಾಗಿ ಕೆಲಸ ಮಾಡಲು ಪರವಾನಿಗೆ ಅವಶ್ಯ ಇರುತ್ತದೆ ಎಂದರೆ ಸರಿ. ಅಂತಹ ಪರವಾನಿಗೆ ಪತ್ರವನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿಲ್ಲಾ ಎಂದರೆ ಸರಿ.

2) ಆರೋಪಿಯು ಗೋಕಾಕ ನಗರದ ಗೊಂಬಿ ಗುಡಿಯ ಮುಂದುಗಡೆ ಮೆನ್ಸ ಕಲೆಕ್ಷನ್ ಎನ್ನುವ ಬಟ್ಟೆ ಅಂಗಡಿ ಪ್ರಾರಂಭ ಮಾಡಿರುತ್ತಾನೆ. ಸದರಿ ಅಂಗಡಿಯನ್ನು ಪ್ರಾರಂಭ ಮಾಡುವಾಗ ಆರೋಪಿ ನನ್ನನ್ನು ಸಹ ಆಹ್ವಾನ ಮಾಡಿದ್ದನು. ಆರೋಪಿಯ ಅಂಗಡಿಯು ಅಂದಾಜು ಮೂರು ವರ್ಷಗಳವರೆಗೆ ಚೆನ್ನಾಗಿ ನಡೆದಿತ್ತು.

3) ಆರೋಪಿಗೆ ನಾನು ನಗದಾಗಿ ರೂ. 8,50,000/- ಹಣ ನೀಡಿರುತ್ತೇನೆ. ನಾನು ಆರೋಪಿಗೆ ರೂ. 8,50,000/- ಹಣವನ್ನು ನೀಡುವ ಸಮಯದಲ್ಲಿ ಆರೋಪಿ ಮತ್ತು ನಾನು ಇಬ್ಬರೆ ಇದ್ದೇವು ಬೇರೆ ಯಾರು ಇರಲಿಲ್ಲ. ಆರೋಪಿಗೆ ರೂ. 8,50,000/- ಹಣ ನೀಡಿರುತ್ತೇನೆ ಎಂದು ಹೇಳುವ ಸಮಯದಲ್ಲಿ ಆರೋಪಿಯ ಕಡೆಯಿಂದ ಯಾವುದೇ ದಾಖಲಾತಿಗಳನ್ನು ನಾನು ಮಾಡಿಕೊಂಡಿರುವುದಿಲ್ಲ. ದಿಃ 28-06-2022 ರಂದು ನಾನು ಆರೋಪಿಗೆ ರೂ. 8,50,000/- ಹಣವನ್ನು ನೀಡಿರುತ್ತೇನೆ. ಮುಂದೆ ಒಂದು ವರ್ಷ ಬಿಟ್ಟು ನಾನು ಆರೋಪಿಗೆ ಹಣ ಮರುಪಾವತಿ ಮಾಡಲು ಕೋರಿಕೊಂಡಾಗ ಆರೋಪಿ ಈ

ಪ್ರಕರಣದ ಚೆಕ್ಕನ್ನು ನನಗೆ ನೀಡಿರುತ್ತಾನೆ. ನಿಪಿ-1 ರ ಚೆಕ್ಕನ್ನು ಆರೋಪಿ ತನ್ನ ಕೆಲಸಗಾರನಾದ ರಾಜು ಎನ್ನುವವರ ಕಡೆಯಿಂದ ಬರೆಯಿಸಿ, ಸಹಿ ಮಾಡಿ ನನಗೆ ನೀಡಿರುತ್ತಾನೆ. ನಿಪಿ-1 ರ ಚೆಕ್ಕಿನಲ್ಲಿ ಸಂಖ್ಯೆಯಲ್ಲಿ ರೂ. 3,50,000/- ಇದ್ದಿರುವುದನ್ನು ತಿದ್ದುಪಡಿ ಮಾಡಿ ನಾನು ರೂ. 8,50,000/- ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

C.C.No.157/2020
CW-1 PW-1

<u>ಸಾಕ್ಷಿಗೆ ದಿನಾಂಕ 28-06-2022 ರಂದು ಪ್ರಮಾಣ ವಚನ ಬೋಧಿಸಸಲಾಯಿತು.</u>

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್.ಬಿ.ಐ ರವರಿಂದ**

ನಾನು 7ನೇ ತರಗತಿಯವರೆಗೆ ಓದಿರುತ್ತೇನೆ. ನಿಪಿ1 ರ ದೂರನ್ನು ನಾನು 30 ನೆವೆಂಬರ 2019 ರಂದು ನೀಡಿರುತ್ತೇನೆ. ನಿಪಿ-1 ರ ದೂರನ್ನು ಗೋಕಾಕನ ನಗರ ಪೊಲೀಸ ಠಾಣೆಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ನಾನು 30-11-2019 ರಂದು ನಿಪಿ1 ರಂತೆ ದೂರು ನೀಡುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ-1 ರ ದೂರನ್ನು ಆರೋಪಿಯ ವಿರುದ್ಧ ಕೊಡುವ ಪೂರ್ವದಲ್ಲಿ ಸಂಕೇಶ್ವರ ಪೋಲಿಸ ಠಾಣೆಯಲ್ಲಿಯಲ್ಲಿಯೂ ಸಹ ದೂರು ನೀಡಿದ್ದೆ, ಸಂಕೇಶ್ವರ ಪೋಲಿಸ ಠಾಣೆಯ ಮೊಕದ್ದಮೆ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಸಂಕೇಶ್ವರ ಪೋಲಿಸ ಠಾಣೆಯವರು ನನ್ನ ಮಾಹಿತಿ ಮೇರೆಗೆ ದೂರನ್ನು ಬರೆದಿರುತ್ತಾರೆ.

ಆರೋಪಿ ನನ್ನ ಜೊತೆ ಮದುವೆಯಾದ ನಂತರ ನಾಲ್ಕು ವರ್ಷಗಳವರೆಗೆ ಚೆನ್ನಾಗಿ ನೋಡಿಕೊಂಡು ನಂತರ ಜನೆವರಿ ತಿಂಗಳಲ್ಲಿ ಹೊಡೆಯಲು ಪ್ರಾರಂಭ ಮಾಡಿದ್ದ ಸದರಿ ಜನವರಿ ತಿಂಗಳು ಯಾವ ವರ್ಷಕ್ಕೆ ಸಂಬಂಧಿಸಿದ್ದು ಎನ್ನುವ ಪ್ರಶ್ನೆಗೆ ಸಾಕ್ಷಿಯು ಇವತ್ತಿನಿಂದ 3 ವರ್ಷಗಳ ಹಿಂದೆ ಎಂದು ಉತ್ತರಿಸಿರುತ್ತಾರೆ. ನನ್ನ ಮದುವೆ ಆರೋಪಿ ಜೊತೆಯಾಗಿ ಅಂದಾಜು 20 ವರ್ಷಗಳು ಕಳೆದಿರುತ್ತವೆ ಎಂದರೆ ಸರಿ.

ನಿಪಿ-1 ರ ದೂರನ್ನು ಸ್ವೀಕರಿಸಿದ ನಂತರ ಪೊಲೀಸರು ನನ್ನನ್ನು ಪಂಚನಾಮೆಗಾಗಿ ಆರೋಪಿ ಮನೆಗೆ ಕೆರೆಸಿದ್ದರು. ಪೊಲೀಸರು ನನಗೆ ಪಂಚನಾಮೆಗಾಗಿ ಫೋನ ಮುಖಾಂತರ ಕರೆದ ಮೇರೆಗೆ ನಾನು ಆರೋಪಿಯ ಮನೆಗೆ ಹೋಗಿದ್ದೆ. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಈಗ ನೆನಪಿಲ್ಲ. ನಾನು ಕಳೆದ 8-10 ವರ್ಷಗಳಿಂದ ನನ್ನ ತವರೂರಾದ ಹುಕ್ಕೇರಿ ತಾಲೂಕಿನ ಗೊಟೂರ ದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಪೊಲೀಸರು ಪಂಚನಾಮೆಗಾಗಿ ನನ್ನನ್ನು ಕರೆದಾಗ ನಾನು ನನ್ನ ತವರೂರಾದ ಗೊಟೂರಲ್ಲಿ ವಾಸವಾಗಿದ್ದೆ ಎಂದರೆ ಸರಿ.ಗೊಟೂರದಿಂದ ಪಂಚನಾಮೆ ಮಾಡಲು ನಾನು ಸಾಯಂಕಾಲ 6.00 ಗಂಟೆಗೆ ಗೋಕಾಕ ಫಾಲ್ಸಗೆ ಬಂದಿದ್ದೆ. ನಾನು ಆರೋಪಿಯ ಮನೆಗೆ ಬಂದ ನಂತರ ಪೊಲೀಸರು ಸಹ ಆರೋಪಿಯ ಮನೆಗೆ ಬಂದಿದ್ದರು. ಒಬ್ಬ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದರು, ಅವರ ಜೊತೆ ಪಂಚ ಸಾಕ್ಷಿದಾರರು ಸಹ ಇದ್ದರು. ಪಂಚಸಾಕ್ಷಿದಾರರು ನಮ್ಮೂರಿನವರೆ ಆಗಿದ್ದರು. ಸದರಿ ಪಂಚಸಾಕ್ಷಿದಾರನ್ನು ಪೊಲೀಸರು ಕರೆಸಿದ್ದರು.

ಪಂಚನಾಮೆಯನ್ನು ಪೊಲೀಸರು ನಮ್ಮ ಸಮಕ್ಷಮ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಮಗೆ ಮಾಹಿತಿ ಕೇಳಿದರು ನಾವು ಮಾಹಿತಿ ನೀಡಿ ಹೋಗಿರುತ್ತೇವೆ ಅವರು ಏನು ಮಾಡಿರುತ್ತಾರೆ ಎಂಬುಹುದು ನನಗೆ ಗೊತ್ತಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ತನ್ನ ಅಣ್ಣನ ಮಾತು ಕೇಳಿ ನನಗೆ ಹೊಡೆ ಬಡೆ ಮಾಡಿದ್ದಕ್ಕಾಗಿ ನಾನು ದೂರು ನೀಡಿರುತ್ತೇನೆ. ನಿಖರವಾಗಿ ಯಾವ ದಿನಾಂಕದಂದು

ಆರೋಪಿ ನನಗೆ ಅವರ ಅಣ್ಣನ ಮಾತು ಕೇಳಿ ಹೊಡಿ ಮಾಡಿದ್ದ ಎಂಬುಹುದು ನನಗೆ ಈಗ ನೆನಪಿಲ್ಲ.ಪೊಲೀಸರು ನನ್ನಿಂದ ನಿಪಿ1 ರ ದೂರು ಕೊಡುವಾಗ ಒಮ್ಮೆ ಸಹಿ ಪಡೆದಿದ್ದರು ಅದರಂತೆ ಪಂಚನಾಮೆ ಮಾಡುವಾಗ ಮತ್ತೊಮ್ಮೆ ಸಹಿ ಪಡೆದ್ದರು ಅವುಗಳನ್ನು ಬಿಟ್ಟು ಬೇರೆ ಯಾವತ್ತು ನಾನು ಪೊಲೀಸರ ಮುಂದೆ ಸಹಿ ಮಾಡಿರುವುದಿಲ್ಲ.

ದಿಃ18-10-2019 ರಂದು ಹೇಮಲತಾ, ಪ್ರಭು, ಯಲ್ಲಪ್ಪ, ಪರಶುರಾಮ ಪತ್ತೆನ್ನವರ, ಬಸವರಾಜ ವಿನೋದ ಕುಮಾರ ಪಕೀರವ್ವ ಚಕ್ಕಲಗುಡ್ಡ ಇವರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡಿ ಬಡಿ ಮಾಡಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ಘಟನೆ ಕುರಿತು ನಾನು ಪೊಲೀಸರಿಗೆ ದೂರು ನೀಡಿಲ್ಲ ಎಂದರೆ ಸರಿ.ದಿಃ 18-10-2019 ರ ನಂತರ ನನ್ನ ಭಾವ ಪ್ರಭುರವರು ನನಗೆ ತವರು ಮನೆಗೆ ಹೋಗು ಎಂದು ರಸ್ತೆಯ ಮೇಲೆ ಬಿಟ್ಟು ಬಂದಿದ್ದರು ಎಂದು ನುಡಿದಿರುತ್ತೇನೆ ಎಂದರೆ ಸರಿ. ಸದರಿ ವಿಷಯದ ಕುರಿತು ನಾನು ಹಿರಿಯರೊಂದಿಗೆ ವಿಚಾರಣೆ ಮಾಡಿದ ನಂತರ ಊರ ಹಿರಿಯರು ಆರೋಪಿಗೆ ನನ್ನನ್ನು ಕರೆದುಕೊಂಡು ಹೋಗಲು ಬುದ್ದಿವಾದ ಹೇಳಿದರು ಸಹ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನನ್ನನ್ನು ಕರೆದುಕೊಂಡು ಹೋಗದೇ ಇರುವ ಕಾರಣಕ್ಕಾಗಿ ದೂರು ನೀಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ದಿಃ 18-10-2019 ರಂದು ಘಟನೆ ಆದ5ದಿನಗಳ ನಂತರ ನಾನು ಹಿರಿಯರನ್ನು ಕೂಡಿಸಿದ್ದೆ, ಹಿರಿಯುರು ಆರೋಪಿಗೆ ನನ್ನನ್ನು ಕರೆದುಕೊಂಡು ಹೋಗಲು ತಿಳಿಸಿದರು ಸಹ ನನ್ನನ್ನು ಆರೋಪಿ ಕರೆದುಕೊಂಡು ಹೋಗದೇ ಇರುವ ಕಾರಣಕ್ಕಾಗಿ ನಾನು ದೂರನ್ನು ನೀಡಿರುತ್ತೇನೆ. ನಾನು ಸುಮಾರು 2 ವರ್ಷಗಳವರೆಗೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಲು ಬರಬಹುದು ಎಂದು ಕಾಯ್ದು ನಂತರ ದೂರನ್ನು ನೀಡಿರುತ್ತೇನೆ. ನಿಪಿ-1 ರ ದೂರಿನಲ್ಲಿ ಬರೆದ ವಿಷಯಗಳ ಕುರಿತು ನನಗೆ ವೈಯಕ್ತಿಕವಾದ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅದರಂತೆ ಪಂಚನಾಮೆಯಲ್ಲಿಯೂ ಸಹ ಏನೂ ಬರೆದಿರುತ್ತದೆ ಎಂಬುಹುದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆರೋಪಿ 1 ರವರಿಗೆ ಕಳೆದ 4-5 ವರ್ಷಗಳಿಂದ ಆರೋಗ್ಯ ಸರಿ ಇಲ್ಲ ಎಂದರೆ ಸರಿ. ಆರೋಪಿ ಅನಾರೋಗ್ಯದಿಂದ ಬಳಲುತ್ತಿರುವುದಕ್ಕಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾ.ದಂ., ಗೋಕಾಕ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **08-03-2022**

C.C.No.157/2020
CW-1 PW-1

ಸಾಕ್ಷಿದಾರರ ಹೆಸರು - ಲಕ್ಷ್ಮೀ ಬಸವರಾಜ ಚಿಕ್ಕಾಲಗುಡ್ಡ

ವಯಸ್ಸು - 35 ವರ್ಷ

ಉದ್ಯೋಗ - ಗೃಹಿಣಿ

ಸಾಕೀನ - ಗೋಕಾಕ ಫಾಲ್ಸ

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ನನ್ನ ಗಂಡ. ಚಾಸಾ-4 ನನ್ನ ತಂದೆ. ಆರೋಪಿಯ ಜೊತೆ ನನ್ನ ಮದುವೆ 18 ವರ್ಷಗಳ ಹಿಂದೆ ಆಗಿದ್ದು, ಮದುವೆಯಾದ 14 ವರ್ಷಗಳು ಆರೋಪಿಯು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. 4-5 ವರ್ಷಗಳಿಂದ ನನ್ನ ಗಂಡ ತನ್ನ ಅಣ್ಣ ಪ್ರಭು ಮಾತು ಕೇಳಿ ನನಗೆ ಹೊಡಿ ಬಡಿ ಮಾಡುತ್ತಿದ್ದರು. ನನ್ನ ಗಂಡ ಕೆಲಸಕ್ಕೆ ಹೋದಾಗ ಪ್ರಭು ನಮ್ಮ ಮನೆಗೆ ಬಂದು ನನ್ನ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದ. ಸದರಿ ವಿಚಾರವನ್ನು ಅವರ ಹೆಂಡತಿಯಾದ ಹೇಮಲತಾ ರವರಿಗೆ ಹೇಳಿದರೆ ಅವರು ನನಗೆ ಬೋಸುಡಿ ಅಂತಾ ನಿನ್ನ ವರ್ತನೆ ಸರಿ ಇಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ದಿಃ 18-10-2019ರಂದು ಹೇಮಲತಾ, ಪ್ರಭು ಮತ್ತು ಯಲ್ಲವ್ವ ಪರಶುರಾಮ ಪತ್ತೆನ್ನವರ, ಬಸವರಾಜು, ವಿನೋದ ಕುಮಾರ, ಪಕೀರವ್ವ ಚಿಕ್ಕಲಗುಡ್ಡ ಇವರು ನನಗೆ ಅವಾಚ್ಯ ಶಬ್ದಗಳಿಂದ ಬೈದು ನನಗೆ ಹೊಡಿ ಬಡಿ ಮಾಡುತ್ತಿದ್ದರು. ನಂತರ ನನ್ನನ್ನು ನನ್ನ ಭಾವ ಪ್ರಭು ರವರು ನಿನ್ನ ತವರು ಮನೆಗೆ ಹೋಗು ಎಂದು ರಸ್ತೆಯ ಮೇಲೆ ಬಿಟ್ಟು ಬಂದರು. ನಂತರ ಹಿರಿಯರು ಕೂಡಿ ಮಾತನಾಡಿ ನನ್ನನ್ನು ಕರೆದುಕೊಂಡು ಹೋಗಲು ಹೇಳಿರುತ್ತಾರೆ ಆದರೆ ಅವರುಗಳು ಬಂದಿರುವುದಿಲ್ಲ. ನನ್ನ ತಂದೆ ಹಿರಿಯರನ್ನು ಕೂಡಿಸಿದರು ಆದರೆ ಅವರು ಬರದ ಕಾರಣ ನಾನು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1, ಅದರಲ್ಲಿರುವ ಸಾಕ್ಷ್ಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2-ಎ ಎಂದು ಗುರುತಿಲಾಯಿತು. ಘಟನಾ ವಿಚಾರ ಪೊಲೀಸರಿಗೆ ನಾನು ಮರು ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u>**

ಆರೋಪಿ ಪರ ವಕೀಲರು ಇಲ್ಲದ ಕಾರಣ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಪ್ರಿಯಾಂಕ ಟಿ.ಕೆ.)
ಪ್ರ.ದಿ.&ನ್ಯಾ.ದಂ., ಗೋಕಾಕ.